ಓ.ಎಸ್. ನಂ.65/2008

ಡಿ.ಡಬ್ಲು-1 ರಿಜ್ವಾನಾ ಬೇಗಂ ಗಂಡ ಚಾಂಸಾಬ ಶೇಖ್ ಸಾ. ಆಳಂದ

**ಸಾಕ್ಷಿಯನ್ನು ಇಂದು ದಿನಾಂಕಃ 20-12-2021 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಎಸ್.ಎ.ಪಿ. ವಕೀಲರಿಂದ**

ಈ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ನನ್ನ ಮುಖ್ಯ ವಿಚಾರಣೆ ಶಪಥ ಪತ್ರವನ್ನು ಸಲ್ಲಿಸುತ್ತಿದ್ದು ಅದರಲ್ಲಿ ಬರೆದ ವಿಚಾರಗಳು ಸತ್ಯವಾಗಿರುತ್ತವೆ. ಅದನ್ನು ನನ್ನ ಹೇಳಿಕೆಯ ಮೇರೆಗೆ ತಯಾರಿಸಿದ್ದು ಅದನ್ನು ಓದಿಸಿ ತಿಳಿದುಕೊಂಡು ನಾನು ನನ್ನ ಸಹಿಯನ್ನು ಮಾಡಿರುತ್ತೇನೆ.

ನಾನು ಈ ದಿನ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ದಿನಾಂಕ: 25.08.2007 ರ ಕ್ರಯ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ-7 ಎಂದು, ದಿಃ 25.03.1965 ರ ರೂ.90/- ಕ್ರಯದ ಮೊಬಲು ಹೊಂದಿರುವ ನೊಂದಾವಣಿ ಆಗಿರದ ಕ್ರಯ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ಆಕ್ಷೇಪಣೆಗೊಳಪಟ್ಟು ನಿಡಿ-8 ಎಂದು, ಅದರ ತರ್ಜುಮೆ ಪ್ರತಿಯನ್ನು ನಿಡಿ-8(ಎ) ಎಂದು ಗುರುತಿಸಲಾಯಿತು. ದಿಃ 11.01.2008 ರ ಕಟ್ಟಡ ಅನುಮತಿ ಪತ್ರವನ್ನು ನಿಡಿ-9 ಎಂದು, ನೀಲಿ ನಕಾಶೆಯನ್ನು ನಿಡಿ-10 ಎಂದು, ನಾಲ್ಕು ಭಾವಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-11 ರಿಂದ 14 ಎಂದು ಗುರುತಿಸಲಾಯಿತು, ಅದಕ್ಕೆ ಸಂಬಂಧಪಟ್ಟ ಸಿ.ಡಿಯನ್ನು ನಿಡಿ-15 ಎಂದು ಗುರುತಿಸಲಾಯಿತು ಮತ್ತು ಭಾವಚಿತ್ರಗಳ ರಸೀದಿಯನ್ನು ನಿಡಿ-16 ಎಂದು ಗುರುತಿಸಲಾಯಿತು. ಇನ್ನೊಂದು ಭಾವಚಿತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ-17 ಎಂದು, ಅದಕ್ಕೆ ಸಂಬಂಧಪಟ್ಟ ರಸೀದಿಯನ್ನು ನಿಡಿ-18 ಎಂದು ಗುರುತಿಸಲಾಯಿತು.

[ ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು ]

**ಓ.ಹೇ.ಕೆ.ಸರಿ.ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.